'ಹೆಂಡತಿಗೂ ಗರ್ಲ್ ಫ್ರೆಂಡ್‌ಗೂ ಇರುವ ವ್ಯತ್ಯಾಸ?'
'ಸುಮಾರು 45 ಕಿಲೋ ಗ್ರಾಂ.'

★★★

'ಕೇವಲ ಶೇಕಡಾ 20 ರಷ್ಟು ಹುಡುಗರಿಗೆ ಬ್ರೈನ್ ಇದೆ; ಉಳಿದವರಿಗೆ 'ಗರ್ಲ್ ಫ್ರೆಂಡ್ಸ್' ಇರ‍್ತಾರೆ.'

★★★

ಹೆಂಗಸರು ಗಂಡಸರಿಗಿಂತ ಹೆಚ್ಚು ದೀರ್ಘಕಾಲ ಸುಖ ಸಂತೋಷ ನೆಮ್ಮದಿ ಆರೋಗ್ಯದಿಂದ ಜೀವಿಸ್ತಾರೆ ಏಕೆ?'
'ಏಕೆಂದರೆ ಅವರಿಗೆ ಹೆಂಡತಿಯರು ಇರುವುದಿಲ್ಲ'

★★★



ಟೀಚರ್: ವರ್ಷಗಳಲ್ಲಿ ಎಷ್ಟು ರಾತ್ರಿಗಳಿವೆ?
ಗುಂಡ: ಹತ್ತು ರಾತ್ರಿ ಸರ್.
ಟೀಚರ್: ಅದ್ಹೇಗೋ?!
ಗುಂಡ: ಒಂಬತ್ತು: ನವರಾತ್ರಿ; ಒಂದು: ಶಿವರಾತ್ರಿ. ಟೋಟಲ್ ಹತ್ತು ರಾತ್ರಿ ಸರ್.

★★★

ರಾಹುಲ್ ಗಾಂಧಿ: ಮಾಮ್! ನಿಮ್ಮಿಂದ ನಾನು ಮದುವೆಯಾಗೋಕೆ ಆಗ್ತಾ ಇಲ್ಲ.
ಸೋನಿಯಾ ಗಾಂಧಿ: (ಪ್ರೀತಿ ವಾತ್ಸಲ್ಯದಿಂದ) ಯಾಕೋ ಪುಟ್ಟಾ?!
ರಾಹುಲ್ ಗಾಂಧಿ: ಎಲ್ಲಾ ಕಡೆ ಹೋರ‍್ಡಿಂಗ್ಸ್‌ನಲ್ಲಿ 'ಸೋನಿಯಾ ಕೋ ಬಹು-ಮತ್ ದೋ' ಅಂತ ಬರೆದಿದೆ. ('ಸೋನಿಯಾಳಿಗೆ ಸೊಸೆ ಕೊಡಬೇಡಿ')

★★★



ಹೆಂಡತಿ: (ಅಚ್ಚರಿ ವ್ಯಕ್ತಪಡಿಸುತ್ತ) ಯಾಕ್ರೀ ಇಷ್ಟು ಬೇಗ ಮನೆಗೆ ಬಂದ್ರೀ?!
ಗಂಡ: ಬಾಸ್, 'ಗೋ ಟು ಹೆಲ್' ಅಂದ ಕಣೇ; ಅದಕ್ಕೆ ಬಂದೆ.

-ಕೆ. ಜಯಮ್ಮ, ಮಂಡ್ಯ




ಈ ಕನ್ನಡಿಯೇನೂ ಚೆನ್ನಾಗಿದೆ, ಆದರೆ... ನನ್ನ ಮುಖ ಸುಂದರವಾಗಿ ಕಾಣ್ತಿಲ್ಲ... ಅದ್ಕೇ ವಾಪಾಸ್ ಮಾಡುತ್ತಿದ್ದೇನೆ..!



ಒಂದು ಬಿಡಿಎ ಸೈಟು ಇದ್ರೆ ಸಿಗುವ ಗೌರವ... ಹತ್ತು 'ವೆಬ್ ಸೈಟ್' ಇದ್ರೂ ಸಿಗಲ್ಲ ಕಣೋ!




ಸ್ವತಃ ಮುಖ್ಯಮಂತ್ರಿಯವರೇ ಎಚ್ಚರಿಕೆ ಕೊಟ್ಟಿದ್ದಾರೆ ಕಣೆ! ಹುಷಾರು ನೀನು ಪಕ್ಕದ್ಮನೆಯವಳ ಜೊತೆ ಏನೇನೊ ಮಾತಾಡ್ತಾ ನಿಲ್ಬೇಡ!




ನಿಮ್ಮ ಖಾಯಿಲೆ ವಾಸಿಯಾಗ್ಬೇಕಾದ್ರೆ ಹೆಚ್ಚು ಕೆಲಸ ಮಾಡಬಾರದು. ಯಾವುದಾದ್ರೂ ಸರ್ಕಾರಿ ಕೆಲಸಕ್ಕೆ ಟ್ರೈ ಮಾಡಿ!

